**ಸಾಕ್ಷಿಯನ್ನು ದಿನಾಂಕ 23-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಜಿ ಟಿ ವಕೀಲರಿಂದಃ</u>**

ಎದುರುದಾರರ ಕುಟುಂಬಕ್ಕೆ ಗೌಜುಗಲ್ಲು ಗ್ರಾಮದ ಸರ್ವೆ ನಂ **31** ರಲ್ಲಿ **4** ಎಕರೆ, ಬೂದುಗವಿ ಗ್ರಾಮದಲ್ಲಿ **4** ಎಕರೆ ಮತ್ತು ತೋರಿವಿನಕೆರೆಯಲ್ಲಿ ಒಂದು ನಿವೇಶನ ಇರುತ್ತದೆ. ಸದರಿ ವಿಸ್ತೀರ್ಣದ ಪೈಕಿ ನನ್ನ ಮಾವನಿಗೆ **4** ಎಕರೆ **13** ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮಾವನ ಭಾಗಕ್ಕೆ ಬಂದ ಜಮೀನು ಕೆರೆಮುಳುಗಡೆ ಆಗಿರುತ್ತದೆ ಎಂದರೆ ಸರಿಯಲ್ಲ, ಬೂದುಗವಿಯಲ್ಲಿದ್ದ ನನ್ನ ಮಾವನಿಗೆ ಸೇರಿದ ಜಮೀನು ಕೆರೆಮುಳುಗಡ ಆಗಿರುತ್ತದೆ. ಮೇಲೆ ಹೇಳಿದ ಜಮೀನು ದಿನ್ನೆ ಜಮೀನು ಎಂದರೆ ಸರಿಯಲ್ಲ, ತೋಟದ ಜಮೀನು. ನಾನು ಆ ಬಗ್ಗೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಎದುರುದಾರರಿಗೆ ಸೇರಿದ ಟ್ರ್ಯಾಕ್ಟರ್, ಜೆಸಿಬಿ ಮತ್ತು ಕಾರು ಇರುತ್ತವೆ, ಅವುಗಳ ಆರ್ ಸಿ ಪುಸ್ತಕ ನನ್ನ ಮಾವನವರ ಹೆಸರಿನಲ್ಲಿ ಇರುತ್ತದೆ. ಎದುರುದಾರರ ಕುಟುಂಬಕ್ಕೆ ಸೇರಿದ ಯಾವುದೇ ಟ್ರ್ಯಾಕ್ಟರ್, ಜೆಸಿಬಿ ಮತ್ತು ಕಾರು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಕಾಂಟ್ರ್ಯಾಕ್ಟರ್ ಪರವಾನಿಗೆ ಪಡೆದಿರುವುದಿಲ್ಲ, ನನ್ನ ಮಾವನವರು ಪಡೆದಿರುತ್ತಾರೆ. ಎದುರುದಾರರು ಹಾಗೂ ಅವರ ತಂದೆ ಯಾವುದೇ ಕಾಂಟ್ರ್ಯಾಕ್ಟರ್ ಕೆಲಸ ಮಾಡುವುದಿಲ್ಲ ಹಾಗೂ ಅವರು ಕಾಂಟ್ರ್ಯಾಕ್ಟರ್ ಪರವಾನಿಗೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**2.** ಎದುರುದಾರರು ಒಬ್ಬನೇ ಗಂಡು ಮಗ ಎಂದರೆ ಸರಿ. ನನ್ನ ಅತ್ತೆ ಮಾವನವರನ್ನು ಎದುರುದಾರರು ನೋಡಿಕೊಳ್ಳುತ್ತಿರುತ್ತಾರೆಂದರೆ ಸರಿ. ನಾನು ಎದುರುದಾರರ ಮನೆಯನ್ನು ಬಿಟ್ಟು ಹೋದ ನಂತರ ಏನು ಕೆಲಸ ಮಾಡುವುದಿಲ್ಲ, ಮನೆಯಲ್ಲೇ ಇರುತ್ತೇನೆ. ನನ್ನ ಹೆಸರಿನಲ್ಲಿ ತೋವಿನಕೆರೆ **SBI** ಶಾಖೆಯಲ್ಲಿ ಖಾತೆ ಇರುತ್ತದೆ ಎಂದರೆ, ಈಗ ಇರುವುದಿಲ್ಲ.

**3.** ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿರುವ ಮಹಿಳೆ ನೀವೆ ಎಂದು ಕೇಳಲಾಗಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಹೌದು ಎಂದು ಒಪ್ಪಿದ ಮೇರೆಗೆ ಸದರಿ ಭಾವಚಿತ್ರವನ್ನು ನಿಡಿ-**6** ಎಂದು ಗುರುತಿಸಲಾಯಿತು. ನಾನು ತುಮಕೂರಿನ ಯಲ್ಲಮ್ಮ ಪುಟ್ಟಮ್ಮ

ಆರ್ಯ ಈಡಿಗರ ಮಹಿಳಾ ವಿದ್ಯಾರ್ಥಿನಿ ನಿಲಯದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೆಲಸದಿಂದ ತಿಂಗಳಿಗೆ ನನಗೆ **18** ಸಾವಿರ ರೂ ಬರುತ್ತಿದ್ದು ಸದರಿ ಸಂಬಳದ ಹಣ ತೋವಿನಕೆರೆಯಲ್ಲಿರುವ ನನ್ನ **SBI** ಖಾತೆಗೆ ನಗದೀಕರಣವಾಗುತ್ತಿರುತ್ತದೆ ಎಂದರೆ ಸರಿಯಲ್ಲ. ಗೃಹಲಕ್ಷ್ಮೀಯೋಜನೆ ಅಡಿಯಲ್ಲಿ ತಿಂಗಳಿಗೆ ನನಗೆ **2** ಸಾವಿರ ರೂ ಬರುತ್ತಿರುತ್ತದೆ ಎಂದರೆ ಸರಿ, ಸದರಿ ಹಣವೂ ಸಹಾ ತೋವಿನಕೆರೆಯಲ್ಲಿರುವ ನನ್ನ **SBI** ಖಾತೆಗೆ ಜಮಾ ಆಗುತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಮನಸ್ವಿನಿ ಯೋಜನೆಅಡಿಯಲ್ಲಿ ತಿಂಗಳಿಗೆ **2** ಸಾವಿರ ರೂ ಹಣ ಬರುತ್ತಿದ್ದು ಅದೂ ಸಹಾ ತೋವಿನಕೆರೆಯಲ್ಲಿರುವ ನನ್ನ **SBI** ಖಾತೆಗೆ ಜಮಾ ಆಗುತ್ತಿರುತ್ತದೆ ಎಂದರೆ ಸರಿಯಲ್ಲ. ಒಟ್ಟು ನನಗೆ ಎಲ್ಲಾ ಮೂಲಗಳಿಂದ ಸುಮಾರು **25** ಸಾವಿರ ಆದಾಯ ಬರುತ್ತಿದ್ದು ನಾನು ಜೀವನ ಮಾಡಲು ಅಷ್ಟು ಹಣ ಸಾಕಾಗುತ್ತದೆ ಎಂದರೆ ಸರಿಯಲ್ಲ. ನಾನು ಪಟ್ಟಣದಲ್ಲಿ ಬೆಳೆದಿದ್ದು ನಾನು ಹಳ್ಳಿಯಲ್ಲಿ ವಾಸ ಮಾಡುವುದಿಲ್ಲ ಎಂದು ಎದುರುದಾರರೊಂದಿಗೆ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಮಕ್ಕಳನ್ನು ಕರೆದುಕೊಂಡು ತುಮಕೂರಿನಲ್ಲಿ ಹೋಗಿ ವಾಸ ಮಾಡೋಣ ಎಂದು ನಾನು ಎದುರುದಾರರನ್ನು ಹಲವಾರು ಬಾರಿ ಬಲವಂತ ಮಾಡಿರುತ್ತೇನೆಂದರೆ ಸರಿಯಲ್ಲ. ಆ ಕಾರಣ ಎದುರುದಾರರು ಒಪ್ಪದೇ ಇರುವ ಕಾರಣ ನಾನು ಅವರ ವಿರುದ್ಧ ಈ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**4.** ನನ್ನ ಮಾವನಿಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಅವರಿಗೆ ಸೇರಿದ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಮಗ ಗುರುಪ್ರಸಾದ್ ರವರ ಹೆಸರಿಗೆ ದಿಃ **04.02.2022** ರಂದು ವಿಲ್ ನ್ನು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಎದುರುದಾರರ ಕುಟುಂಬದವರು ನಾನು ಎದುರುದಾರರ ಜೊತೆ ವಾಸ ಮಾಡಲು ಯಾವತ್ತೂ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಎದುರುದಾರರ ಜೊತೆ ವಾಸ ಮಾಡಲು ಎದುರುದಾರರ ಕುಟುಂಬದವರು ಪ್ರತ್ಯೇಕವಾಗಿ ಮನೆಯನ್ನು ಮಾಡಿಕೊಟ್ಟಿದ್ದರು ಎಂದರೆ ಕೊಟ್ಟಿಗೆ ಮನೆ ಕೊಟ್ಟಿದ್ದರು. ಎದುರುದಾರರು ಹಾಗೂ ಎದುರುದಾರರ ಕುಟುಂಬದವರು ನನಗೆ ಯಾವತ್ತೂ ದೈಹಿಕವಾಗಿ, ಮಾನಸಿಕವಾಗಿ ಕಿರುಕುಳವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಸುಮಾರು ವರ್ಷಗಳಿಂದ ಹೃದಯಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ಕಾರಣ ಈ ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರ ಹಣವನ್ನು

ನೀಡುವ ಸಾಮರ್ಥ್ಯ ಎದುರುದಾರರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ **25** ಸಾವಿರ ಆದಾಯ ಬರುತ್ತಿದ್ದು ಹಾಗೂ ನಾನು ಆರೋಗ್ಯವಾಗಿ ಚೆನ್ನಾಗಿದ್ದು ನನ್ನ ಜೀವನ ಮಾಡಲು ಎದುರುದಾರರ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

C.Mis.126/2022

ಪಿಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.

*Koratagere.*